## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

**Spl. CASE: 41/2023**

**ಪ್ರಾ.ಸಾ. 07**
**ದೋ.ಸಾ. 12**

| | | |
|---|---|---|
| ಸಾಕ್ಷಿಯ ಹೆಸರು | : | ಬಿ ಪಿ ಮಂಜು |
| ತಂದೆಯ ಹೆಸರು | : | ಪುಟ್ಟ ಸಿದ್ದಯ್ಯ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಪಿ.ಐ ವೇಮಗಲ್ ಪೊಲೀಸ್ ಠಾಣೆ |
| ವಾಸ | : | ವೇಮಗಲ್. |

**ದಿನಾಂಕ 09-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ನಾನು ದಿನಾಂಕ 08.10.2021 ರಿಂದ ದಿನಾಂಕ 04.08.2023 ರ ತನಕ ನಾನು ಚಿಕ್ಕಬಳ್ಳಾಪುರ CEN ಪೊಲೀಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 20.09.2022 ರಂದು ಮಃ 3.15 ಗಂಟೆ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಪ್ರಾಸಾ–1 ಪಿ ಎಸ್ ಐ ಶರತ್ ಕುಮಾರ್ ರವರು ಠಾಣೆಗೆ ಹಾಜರಾಗಿ ಒಂದು ವರದಿಯೊಂದಿಗೆ ಆರೋಪಿ ವೇಣುಗೋಪಾಲ್ ಮತ್ತು ಅಮಾನತ್ತು ಪಡಿಸಿಕೊಂಡ ಮಾಲನ್ನು ಹಾಜರುಪಡಿಸಿದ್ದು, ನಾನು ಅದನ್ನು ಸ್ವೀಕರಿಸಿ ಠಾಣಾ

ಮೊಕ್ಕದ್ದಮ್ಮೆ ಸಂಖ್ಯೆ 68/2022 ರಂತೆ ಪ್ರಕರಣವನ್ನು ದಾಖಲು ಮಾಡಿ ಪ್ರ.ವ ವರದಿಯನ್ನು ಘನ ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ–7 ಎಂದು ಗುರುತಿಸಲಾಗಿದ್ದು, ಹಿಂಬರಹ ಹಾಗೂ ಸಾಕ್ಷಿ ಸಹಿಯನ್ನು **ನಿಪಿ–7 (ಬಿ)** ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–13** ಎಂದು, ಹಿಂಬರಹ ಹಾಗೂ ಸಾಕ್ಷಿ ಸಹಿಯನ್ನು **ನಿಪಿ–13 (ಎ)** ಎಂದು ಗುರುತಿಸಲಾಯಿತು.

3.ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಬಂದನಕ್ಕೆ ಒಳಪಡಿಸಿರುತ್ತೇನೆ. ಅದೇ ಕಾಲಕ್ಕೆ ಆರೋಪಿಯ ಹೇಳಿಕೆಯನ್ನು ಸಹ ಪಡೆದಿರುತ್ತೇನೆ. ನಂತರ ಆರೋಪಿಯನ್ನು ರಿಮಾಂಡ್ ಅರ್ಜಿಯೊಂದಿಗೆ ನಮ್ಮ ಸಿಬ್ಬಂದಿ ಮೂಲಕ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅಮಾನತ್ತು ಪಡಿಸಿದ್ದ ಮಾಲನ್ನು ಸ್ವೀಕರಿಸಿಕೊಂಡು ಠಾಣಾ ಮಾಲು ಪಟ್ಟಿ ಸಂಖ್ಯೆ 63/2022 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ನನ್ನ ತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರಾದ ಫ್ರಾಸಾ–2 ರಿಂದ 4, ಚಾಸಾ–5 ರಿಂದ 9 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ.

4. ದಿನಾಂಕ 21.09.2022 ರಂದು ದಾಳಿ ನಡೆಸಿರುವ ಬಗ್ಗೆ ಎಸ್ ಪಿ ಚಿಕ್ಕಬಳ್ಳಾಪುರ ರವರಿಗೆ ವರದಿಯನ್ನು ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿ ಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ–14** ಎಂದು, ಸಾಕ್ಷಿ ಸಹಿಯನ್ನು **ನಿಪಿ–14 (ಎ)** ಎಂದು ಗುರುತಿಸಲಾಯಿತು.

5. ದಿನಾಂಕ 20.09.2022 ರಂದು ಅಮಾನತ್ತು ಪಡಿಸಿಕೊಂಡಿದ್ದ ಮಾಲಿನ Correctness Certificate ಪಡೆದುಕೊಳ್ಳಲು ಮಾನ್ಯ ವಿಶೇಷ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿಕೊಂಡಿದ್ದು, ದಿನಾಂಕ 23.09.2022 ರಂದು ನ್ಯಾಯಾಲಯದ ಆದೇಶವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಸದರಿ ಮನವಿ ಹಾಗೂ ನ್ಯಾಯಾಲಯದ ಆದೇಶವನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ–15** ಎಂದು ಗುರುತಿಸಲಾಯಿತು.

6. ಅದರಂತೆ Prl Civil Judge and JMFC ಚಿಕ್ಕಬಳ್ಳಾಪುರ ನ್ಯಾಯಾಧೀಶರ ಮುಂದೆ ದಿನಾಂಕ 23.09.2022 ರಂದು ಮಾಲನ್ನು ಹಾಜರುಪಡಿಸಿ Correctness Certificate ಅನ್ನು ಪಡೆದುಕೊಂಡಿರುತ್ತೇನೆ. ಆ ಕಾಲಕ್ಕೆ ಭಾವ ಚಿತ್ರಗಳನ್ನು ಸಹ ತೆಗೆದಿರುತ್ತೇನೆ. ಸದರಿ ಸಮಯದಲ್ಲಿ ಮಾನ್ಯ ನ್ಯಾಯಾಧೀಶರು ಎಫ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ 100 ಗ್ರಾಂ ಗಾಂಜಾವನ್ನು ಬೇರ್ಪಡಿಸಿರುತ್ತಾರೆ. ನಂತರ ಎರಡೂ ಬಗೆಯ ಗಾಂಜಾ ಪ್ಯಾಕೇಟ್‌ಗಳನ್ನು ಮುಂದಿನ ಕ್ರಮಕ್ಕಾಗಿ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಿ ನಮ್ಮ ವಶಕ್ಕೆ ಪಡೆಯಲಾಯಿತು. ಸಾಕ್ಷಿ Correctness

Certificate ಹಾಗೂ ಎರಡು ಫೋಟೋಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ–16** ಎಂದು ಗುರುತಿಸಲಾಯಿತು.

7. ಮಾದರಿ ಗಾಂಜಾ ಪ್ಯಾಕೇಟ್ ಅನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 64/2022 ರಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಆ ನಂತರ ದಿ.30.09.2022 ರಂದು ಸದರಿ ಮಾದರಿ ಗಾಂಜಾ ಪ್ಯಾಕೇಟ್ ಅನ್ನು ಎಫ್ ಎಸ್ ಎಲ್ ಪರೀಕ್ಷೆಗಾಗಿ ನಮ್ಮ ಸಿಬ್ಬಂದಿ ಹೆಚ್.ಸಿ–80 ರವರಿಗೆ ಪಾಸ್ ಪೋರ್ಟ್ ನೀಡಿ ಕಳುಹಿಸಿಕೊಟ್ಟಿದ್ದು, ಸದರಿ ರವರು ಅದನ್ನು ಎಫ್ ಎಸ್ ಎಲ್ ಕಛೇರಿಯಲ್ಲಿ ತಲುಪಿಸಿ ಸ್ವೀಕೃತಿಯನ್ನು ಪಡೆದು ತಂದು ನನ್ನ ಸಮಕ್ಷಮದಲ್ಲಿ ಹಾಜರುಪಡಿಸಿದ್ದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿರುತ್ತೇನೆ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ–17** ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆಮಾಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

8. ದಿ.27.09.2022 ರಂದು ಉಳಿದ ಗಾಂಜಾವನ್ನು ವಿಲೇವಾರಿ ಮಾಡುವ ಸಲುವಾಗಿ ನ್ಯಾಯಾಲಯದ ಆದೇಶವನ್ನು ಪಿ.ಎಫ್ ಸಲ್ಲಿಸಿದಾಗ ಪಡೆದುಕೊಂಡಿದ್ದು, ಅದರಂತೆ ಜಿಲ್ಲಾ ಸಶಸ್ತ್ರ ಮೀಸಲು ಪಡೆ ರವರ ವಶಕ್ಕೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿ ಮನವಿ ಪತ್ರ ಹಾಗೂ ಜಿಲ್ಲಾ ಸಶಸ್ತ್ರ ಮೀಸಲು ಪಡೆಯವರು ನೀಡಿದ ಹಿಂಬರಹದ

ಪ್ರತಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ–18** ಎಂದು ಸಾಕ್ಷಿಯ ಸಹಿಯನ್ನು **ನಿಪಿ–18(ಎ)** ಗುರುತಿಸಲಾಯಿತು.

9. ದಿ.12.03.2023 ರಂದು ಕೃತ್ಯ ನಡೆದ ಸ್ಥಳದ ಕಂದಾಯ ದಾಖಲಾತಿಗಳನ್ನು ನೀಡುವಂತೆ ತಹಸೀಲ್ದಾರ್ ಚಿಕ್ಕಬಳ್ಳಾಪುರ ರವರಿಗೆ ಮನವಿಯನ್ನು ಸಲ್ಲಿಸಿ ದಾಖಲಾತಿಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ–10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ–10(ಬಿ)** ಎಂದು ಗುರುತಿಸಲಾಯಿತು.

10. ದಿ.29.03.2023 ರಂದು ತಹಸೀಲ್ದಾರ್ ರವರು ನೀಡಿದ ದಾಖಲಾತಿಗಳಂತೆ ಘಟನಾ ಸ್ಥಳದ RTC ಮಾಲೀಕರಾದ ಪ್ರಾಸಾ–5 ಸತ್ಯನಾರಾಯಣ ರವರ ವಿಚಾರಣೆ ಮಾಡಿದ್ದು, ಸದರಿ ರವರು ತಮ್ಮ ಹೇಳಿಕೆಯಲ್ಲಿ ಆರೋಪಿ ಸದರಿ ಜಮೀನಿನ ಅನುಭವದಲ್ಲಿದ್ದು, ವ್ಯವಸಾಯ ಮಾಡುತ್ತಿರುವ ಬಗ್ಗೆ ಹೇಳಿಕೆ ನೀಡಿರುತ್ತಾರೆ.

11. ಈ ಪ್ರಕರಣದ ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಕಂಡು ಬಂದ ಕಾರಣ, ತನಿಖೆಯನ್ನು ಪೂರ್ಣಗೊಳಿಸಿ, FSL ವರದಿಯನ್ನು ಬಾಕಿಯಿಟ್ಟು, ಘನ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿಕೊಂಡಿರುತ್ತೇನೆ. ಪ್ರಾಸಾ–2 ರವರು ನಿಪಿ–8 ರಂತೆ, ಪ್ರಾಸಾ–3 ರವರು ನಿಪಿ–9 ರಂತೆ, ಪ್ರಾಸಾ–5 ರವರು ನಿಪಿ–11 ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಆರ್. ಜಿ ರವರಿಂದ**

12. ನಿಪಿ–7 ರ ವರದಿಯಲ್ಲಿ ಘಟನಾ ಸ್ಥಳದ ಸರ್ವೆ ನಂಬರ್ ಅನ್ನು ನಮೂದಿಸಿಲ್ಲ ಎಂದರೆ, ಸಾಕ್ಷಿಯು ಅದನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಿರುವುದಾಗಿ ನುಡಿಯುತ್ತಾರೆ. ದೋಷಾರೋಪಣ ಪತ್ರದ ಕಾಲಂ ನಂ 17 ರಲ್ಲಿ ಕೇವಲ ಸರ್ವೆ ನಂ.160 ಎಂದು ನಮೂದಿಸಲಾಗಿದೆ ಎಂದರೆ ಸರಿ. ನಾನು ದಾಳಿಯಲ್ಲಿ ಭಾಗವಹಿಸಿರುವುದಿಲ್ಲ. ನಾನು ನನ್ನ ತನಿಖಾ ಕಾಲದಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದು ಆದರೆ ಯಾವ ದಿನ ಭೇಟಿ ನೀಡಿದ್ದೆ ಎನ್ನುವ ಬಗ್ಗೆ ಈಗ ನೆನಪಿಲ್ಲ.

13. ನಿಪಿ–5 ರ ದಾಳಿ ಪಂಚನಾಮೆಯಲ್ಲಿರುವ ವಿಚಾರಗಳನ್ನು ಕೇಳಿ ತಿಳಿದುಕೊಂಡಿರುತ್ತೇನೆ. ನಿಪಿ–5 ರ ದಾಳಿ ಪಂಚನಾಮೆಯ 4 ನೇ ಪುಟದಲ್ಲಿ ಘಟನಾ ಸ್ಥಳದ ಜಮೀನನ್ನು ವಾಪಸಂದ್ರದ ಶ್ರೀನಿವಾಸ್ ಎನ್ನುವವರಿಗೆ ಭೋಗ್ಯಕ್ಕೆ ಇಟ್ಟಿರುವುದಾಗಿ ನಮೂದಿದೆ ಎಂದರೆ ಸರಿ. ಈ ಬಗ್ಗೆ ಸದರಿ ಶ್ರೀನಿವಾಸ್ ರವರನ್ನು ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಆರೋಪಿಯು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ತಾನೇ ಜಮೀನಿನ ಅನುಭವದಲ್ಲಿ ಇರುವುದಾಗಿ ತಿಳಿಸಿದ ಮೇರೆಗೆ ಹಾಗೂ ಆತನ ತಂದೆ ಫ್ರಾಸಾ–5 ತನ್ನ ಹೇಳಿಕೆಯಲ್ಲಿ ಸದರಿ ಜಮೀನನ್ನು ಯಾರಿಗೂ ಭೋಗ್ಯ ಮಾಡಿರುವುದಿಲ್ಲ ಎಂದು ತಿಳಿಸಿದ ಮೇರೆಗೆ ಮೇಲ್ಕಂಡ ಶ್ರೀನಿವಾಸ್ ರವರನ್ನು ವಿಚಾರಣೆ ಮಾಡಿರುವುದಿಲ್ಲ ಎನ್ನುತ್ತಾರೆ.

14. ಫ್ರಾಸಾ–5 ರವರ ನಿಪಿ–11 ರ ಹೇಳಿಕೆಯನ್ನು ಈ ಪ್ರಕರಣ ದಾಖಲಾಗುವ 6 ತಿಂಗಳ ಮುಂಚೆ ದಾಖಲಿಸಲಾಗಿದೆ ಎಂದರೆ, ಸಾಕ್ಷಿಯು ಕಣ್ಣತಪ್ಪಿನಿಂದಾಗಿ,

ವರ್ಷವನ್ನು 2023 ರ ಬದಲಾಗಿ 2022 ಎಂದು ನಮೂದಿಸಿರುವುದಾಗಿ ನುಡಿಯುತ್ತಾರೆ. ನಿಪಿ–5 ರ ಪಂಚನಾಮೆಯ 4 ನೇ ಪುಟದಲ್ಲಿ "**ಸದರಿ ಜಮೀನಿನಲ್ಲಿ ರೋಜಾ ಹೂವು ಗಿಡಗಳು, ಕನಕಾಂಬರ ಹೂವು ಗಿಡಗಳ ಮಧ್ಯೆ ಸಾಲಿನಲ್ಲಿ ಅಲ್ಲಲ್ಲಿ ಮಿಶನ್ ಶೆಡ್ ನಿಂದ 10 ಮೀಟರ್ ದೂರದಲ್ಲಿ ಒಟ್ಟು 5 ಗಿಡಗಳು, ಹುಲುಸಾಗಿ ಬೆಳೆದಿದ್ದು**" ಎಂದು ನಮೂದಿದೆ ಎಂದರೆ ಸರಿ. ಪ್ರಾಸಾ–5 ರವರ ನಿಪಿ –11 ರ ಹೇಳಿಕೆಯಲ್ಲಿ "**ಸದರಿ ಜಮೀನಿನಲ್ಲಿ ರೋಜಾ ಮತ್ತು ಕನಕಾಂಬರ ಹೂವು ಗಿಡಗಳ ಮಧ್ಯೆ ಅಲ್ಲಲ್ಲಿ 5 ಗಾಂಜಾ ಗಿಡಗಳನ್ನು ಬೆಳೆಸಿರುವುದಾಗಿ**" ಎಂದು ನಮೂದಿದೆ ಎಂದರೆ ಸರಿ. ನಿಪಿ–6 ರಲ್ಲಿರುವ ಫೋಟೋಗಳನ್ನು ನಾನು ಪರಿಶೀಲಿಸಿದ್ದೇನೆ ಎಂದರೆ ಸರಿ. ಸದರಿ ಫೋಟೋಗಳಲ್ಲಿ ಗಿಡಗಳು ಒಂದೆ ಕಡೆ ಬೆಳೆದಿರುವುದು ಕಂಡು ಬರುತ್ತದೆ ಎಂದರೆ ಸಾಕ್ಷಿಯು ಗಾಂಜಾ ಗಿಡಗಳು ಎರಡು ಕಡೆ ಬೆಳೆದಿರುವುದು ಕಂಡು ಬರುತ್ತದೆ ಎನ್ನುತ್ತಾರೆ. ನಿಪಿ–6 ರಲ್ಲಿ ಕಂಡು ಬರುವ ಗಿಡಗಳನ್ನು ಕಿತ್ತಿರುವ ಬಗ್ಗೆ, ಅವುಗಳನ್ನು ಪಂಚರ ಸಮಕ್ಷಮ ತೂಕ ಮಾಡಿದ ಬಗ್ಗೆ ಯಾವುದೇ ಫೋಟೋಗಳು ಕಂಡು ಬರುವುದಿಲ್ಲ ಎಂದರೆ ಸರಿ.

15 ದಾಳಿ ಪಂಚನಾಮೆಯಲ್ಲಿ ನಮೂದಿಸಿರುವ ಗಾಂಜಾ ಗಿಡಗಳ ತೂಕಕ್ಕೂ, ಇನ್ವೆಂಟರಿ ಹಾಗೂ correctness certificate ನಲ್ಲಿ ನಮೂದಿಸಿರುವ ಗಾಂಜಾದ ತೂಕಕ್ಕೂ ವ್ಯತ್ಯಾಸವಿದೆ ಎಂದರೆ ಸಾಕ್ಷಿಯು, ಹಸಿ ಗಾಂಜಾ ಗಿಡವನ್ನು ತೂಕ ಮಾಡಿದಾಗ ಹಾಗೂ ಅದನ್ನು ಒಣಗಿದ ನಂತರ ತೂಕ ಮಾಡಿದಾಗ ಸಾಮಾನ್ಯವಾಗಿ

ತೂಕದಲ್ಲಿ ವ್ಯತ್ಯಾಸ ಕಂಡು ಬರುತ್ತದೆ ಎನ್ನುತ್ತಾರೆ. ಗಾಂಜಾ ಗಿಡಗಳನ್ನು ಕಿತ್ತ ಮೂರು ದಿನಗಳಲ್ಲಿ ಇನ್ವೆಂಟರಿ ಮಾಡಿಸಲಾಗಿದೆ ಎಂದರೆ ಸರಿ. ಆ ಮೂರು ದಿನಗಳಲ್ಲಿ ಗಾಂಜಾ ಗಿಡಗಳ ತೂಕದಲ್ಲಿ ಸುಮಾರು 6 ಕೆ.ಜಿ ಅಷ್ಟು ವ್ಯತ್ಯಾಸವಿದೆ ಎಂದರೆ ಸರಿ. correctness certificate ಮಾಡಿಸುವ ಕಾಲಕ್ಕೆ 100 ಗ್ರಾಂ ಗಾಂಜಾವನ್ನು ಮಾದರಿಗಾಗಿ ತೆಗೆದ ಬಗ್ಗೆ ನಿಪಿ–16 ರಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತೂಕವನ್ನು ಪಿ.ಎಫ್ ನಲ್ಲಿ ನಮೂದಿಸಿರುವುದಾಗಿ ನುಡಿಯುತ್ತಾರೆ. correctness certificate ಮಾಡಿಸುವ ಕಾಲಕ್ಕೆ ತೆಗೆದಿರುವ 2 ಫೋಟೋಗಳಲ್ಲಿ ಮಾದರಿಗಾಗಿ 100 ಗ್ರಾಂ ಗಾಂಜಾವನ್ನು ತೆಗೆದಿರುವ ಬಗ್ಗೆ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. 100 ಗ್ರಾಂ ಗಾಂಜಾ ತೂಕ ಮಾಡಿರುವ ಪ್ರತ್ಯೇಕವಾದ ಫೋಟೋ ಕಂಡು ಬರುವುದಿಲ್ಲ ಎಂದರೆ ಸರಿ.

16. ದಾಳಿ ಕಾಲಕ್ಕೆ ಜಪ್ತು ಪಡಿಸಿದ ಗಾಂಜಾ ಗಿಡಗಳು correctness certificate ಮಾಡುವ ಕಾಲದಲ್ಲಿ ತೆಗೆಸಿದ ಫೋಟೋಗಳಲ್ಲಿ ಕಂಡು ಬರುವುದಿಲ್ಲ ಎಂದರೆ ಸಾಕ್ಷಿಯು ಗಾಂಜಾ ಗಿಡಗಳನ್ನು ಒಂದು ಬಿಳಿ ಚೀಲದಲ್ಲಿ ಹಾಕಿ ಹೊಲೆದು, ಜಪ್ತು ಪಡಿಸಲಾಗಿದ್ದು, ಅದೇ ಚೀಲವನ್ನು ನ್ಯಾಯಾಧೀಶರ ಮುಂದೆ ಹಾಜರು ಪಡಿಸುವುದು ಫೋಟೋದಲ್ಲಿ ಕಂಡು ಬರುತ್ತದೆ ಎಂದ ನುಡಿಯುತ್ತಾರೆ. ದಾಳಿ ಪಂಚನಾಮೆ ಹಾಗೂ correctness certificate ಮಾಡುವ ಕಾಲಕ್ಕೆ ತೆಗೆದಿರುವ ಫೋಟೋಗಳನ್ನು ಯಾರು ತೆಗೆದಿರುತ್ತಾರೆ ಮತ್ತು ಯಾವ ಉಪಕರಣದಿಂದ ತೆಗೆದು

ಎಲ್ಲಿ ಪ್ರಿಂಟ್ ಹಾಕಿಸಿರುತ್ತಾರೆ ಎನ್ನುವ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(b) ರಡಿಯಲ್ಲಿ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ಫೋಟೋ ತೆಗೆದಿರುವವರನ್ನು ದೋಷರೋಪಣ ಪತ್ರದಲ್ಲಿ ಸಾಕ್ಷಿದಾರರನ್ನಾಗಿಸಿಲ್ಲ ಎಂದರೆ ಸಾಕ್ಷಿಯು ದಾಳಿಗೆ ಸಹಕರಿಸಿದಾಗಿ ನಮೂದಿಸಿದ್ದು, ಫೋಟೋ ತೆಗೆದ ಬಗ್ಗೆ ನಮೂದಿಸಿಲ್ಲ ಎನ್ನುತ್ತಾರೆ.

17. ಫ್ರಾಸಾ-5 ರವರು ನಿಪಿ-11 ರ ಹೇಳಿಕೆಯಲ್ಲಿ ಘಟನಾ ಸ್ಥಳದ ಸರ್ವೆ ನಂ.160 ಎಂದು ಹೇಳಿರುವುದು ಕಂಡು ಬರುತ್ತದೆ ಎಂದರೆ ಸರಿ. ನಿಪಿ-10 ರ ದಾಖಲೆಗಳ ಪ್ರಕಾರ ಘಟನಾ ಸ್ಥಳದ ಸರ್ವೆ ನಂ.160/4 ಎಂದು ನಮೂದಿಸಿದ್ದು, ಎರಡಕ್ಕೂ ತಾಳೆಯಾಗುವುದಿಲ್ಲ ಎಂದರೆ ಸಾಕ್ಷಿಯು, ಫ್ರಾಸಾ 5 ರವರು ಅವಿದ್ಯಾಯವಂತರಾಗಿದ್ದು, ಜಮೀನಿನ ಹಳೆಯ ಸರ್ವೆ ನಂಬರ್ ಹೇಳಿದ್ದು, ಅದು ಪೋಡಾಗಿರುವ ಸರ್ವೆ ನಂ.160/4 ಎಂದು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ದೋಷರೋಪಣ ಪತ್ರದಲ್ಲಿ ಘಟನಾ ಸ್ಥಳ ಹಳೆ ಸರ್ವೆ ನಂ.160 ಹಾಗೂ ಹೊಸ ಸರ್ವೆ ನಂ.160/4 ರಲ್ಲಿ ಕಂಡು ಬರುತ್ತದೆ ಎಂದು ನಮೂದಿಸಿಲ್ಲಾ ಎಂದರೆ ಸರಿ. ನಿಪಿ-10 ರ ದಾಖಲಾತಿಗಳನ್ನು ಸ್ವೀಕರಿಸಿದ ನಂತರ ಫ್ರಾಸಾ-5 ರವನ್ನು ವಿಚಾರಣೆ ಮಾಡಿ ಮರುಹೇಳಿಕೆಯನ್ನು ಪಡೆದಿರುವುದಿಲ್ಲ.

18. ನಿಪಿ-10 ರ ದಾಖಲಾತಿಗಳಲ್ಲಿ ರೆವೆನ್ಯೂ ಅಧಿಕಾರಿಗಳಿಗೆ ಆರೋಪಿಯೇ ಘಟನಾ ಸ್ಥಳದ ಜಮೀನಿನ ಅನುಭವದಲ್ಲಿ ಇರುವ ಬಗ್ಗೆ ಯಾರು ಮಾಹಿತಿಯನ್ನು

ನೀಡಿದ್ದರು ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ತಹಸೀಲ್ದಾರ್ ರವರು ವಿ.ಎ ಮತ್ತು ಆರ್.ಐ ರವರ ವರದಿ ಅನುಸಾರ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು, ವಿ.ಎ ಮತ್ತು ಆರ್.ಐ ರವರಿಗೆ ಜಮೀನಿನ ಮಾಲೀಕತ್ವ ಹಾಗೂ ಸ್ವಾಧೀನತ್ವದ ಬಗ್ಗೆ ಮಾಹಿತಿ ಇರುತ್ತದೆ ಎನ್ನುತ್ತಾರೆ. ವಿ.ಎ ರವರು ನೀಡಿದ ವರದಿಯಲ್ಲಿ ಪಂಚರಾಗಿ ಸಹಿ ಮಾಡಿರುವ ವ್ಯಕ್ತಿಗಳ ವಿಳಾಸ ಮತ್ತು ಹೆಸರುಗಳು ಕಂಡು ಬರುವುದಿಲ್ಲ ಹಾಗೂ ವಿ.ಎ ಮತ್ತು ಆರ್.ಐ ರವರಗಳನ್ನು ಸಾಕ್ಷಿದಾರರನ್ನಾಗಿಸಿಲ್ಲ ಎಂದರೆ ಸರಿ. ವಿ.ಎ ಮತ್ತು ಆರ್.ಐ ರವರುಗಳು ಯಾವ ದಿನಾಂಕದಂದು ಸ್ಥಳ ಮಹಜರ್ ಜರುಗಿಸಿದರು ಎನ್ನುವ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಕಂದಾಯ ಅಧಿಕಾರಿಗಳ ಮೇಲೆ ಒತ್ತಡ ಹೇರಿ, ನಿಪಿ-10 ರ ದಾಖಲೆಗಳನ್ನು ಪ್ರಕರಣಕ್ಕೆ ಬೇಕಾದ ರೀತಿಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

19. ಪಂಚರನ್ನು ನೇಮಕ ಮಾಡಿದ ಬಗ್ಗೆ ಮುನಿಸಿಪಾಲಿಟಿ ಕಮಿಷನ್ ರವರು ನಿಮಗೆ ಪತ್ರ ವ್ಯವಹಾರ ಮಾಡಿದ್ದಾರೆಯೇ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ಪತ್ರ ವ್ಯವಹಾರ ಮಾಡಿರುವುದಿಲ್ಲ ಆ ರೀತಿ ನಮ್ಮ ಮನವಿ ಮೇರೆಗೆ ಪಂಚರನ್ನು ಕಳುಹಿಸಿಕೊಟ್ಟಿರುವುದಾಗಿ ನುಡಿಯುತ್ತಾರೆ. ಘಟನಾ ಸ್ಥಳ ನಮ್ಮ ಠಾಣೆಯಿಂದ 1-2 ಕಿ.ಮೀ ದೂರದಲ್ಲಿದೆ ಎಂದರೆ ಸಾಕ್ಷಿಯು ಸುಮಾರು 3 ಕಿ.ಮೀ ಅಂತರದಲ್ಲಿರಬಹುದು ಎನ್ನುತ್ತಾರೆ. ನನ್ನ ತನಿಖಾವಧಿಯಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿರುವ ಬಗ್ಗೆ, ಘಟನಾ ಸ್ಥಳದ ಆಜು ಬಾಜುದಾರರನ್ನು ವಿಚಾರಣೆ ಮಾಡಿ, ಹೇಳಿಕೆ ದಾಖಲಿಸಿದ ಬಗ್ಗೆ

ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಘಟನಾ ಸ್ಥಳವು ಆರೋಪಿಗೆ ಸೇರಿರುವುದಾಗಿ, ತಹಸೀಲ್ದಾರ್‌ರವರು ಹಾಗೂ ಕಂದಾಯ ಅಧಿಕಾರಿಗಳು ನಿಪಿ–10 ರಂತೆ ದಾಖಲೆ ನೀಡಿದ ಆ ಬಗ್ಗೆ ತನಿಖೆ ಮಾಡಿಲ್ಲ ಎನ್ನುತ್ತಾರೆ. ಮು.ಮಾ 1 ಸ್ಯಾಂಪಲ್ ಈ ಪ್ರಕರಣಕ್ಕೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಸ್ಯಾಂಪಲ್ ತೆಗೆಯುವ ಬಗ್ಗೆ ಫೋಟೋಗಳಲಾಗಲೀ ಅಥವಾ correctness certificate ನಲ್ಲಾಗಲೀ ಯಾವುದೇ ನಮೂದು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–6 ರ ಫೋಟೋಗಳಲ್ಲಿ ಕಂಡು ಬರುವ ಸ್ಥಳ ಆರೋಪಿಗೆ ಸೇರಿಲ್ಲದ ಕಾರಣ, ಸದರಿ ಗಿಡಗಳನ್ನು ಕಿತ್ತ ಬಗ್ಗೆ ಫೋಟೋಗಳನ್ನು ತೆಗೆದು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

20. ನಿಪಿ–5 ರ ಪಂಚನಾಮೆಯ 2 ನೇ ಪುಟದ ತಳಭಾಗದಲ್ಲಿ ಘಟನಾ ಸ್ಥಳಕ್ಕೆ ಆರೋಪಿಯನ್ನು ಆತನ ಮನೆಯಿಂದ ಸಿಬ್ಬಂದಿಗಳು ಕರೆ ತಂದು PSI ರವರ ಮುಂದೆ ಹಾಜರು ಪಡಿಸಿರುವ ಬಗ್ಗೆ ನಮೂದಿದೆ ಎಂದರೆ ಸರಿ. ಆರೋಪಿಯ ಸ್ವಇಚ್ಛಾ ಹೇಳಿಕೆಯಲ್ಲಿ " **ಈಗಿದ್ದಾಗ ಈ ದಿನ ದಿ.20.09.2022 ರಂದು ಮಃ12.30 ಗಂಟೆ ಸಮಯದಲ್ಲಿ ರೋಜ್ ಗಿಡಗಳ ತೋಟದಲ್ಲಿದ್ದಾಗ ಪೊಲೀಸರು ನನ್ನನ್ನು ವಶಕ್ಕೆ ಪಡೆದುಕೊಂಡು**" ಎಂದು ನಮೂದಿದೆ ಎಂದರೆ ಸರಿ. ಹೇಳಿಕೆಯ ಸದರಿ ಭಾಗವನ್ನು **ನಿಡಿ–2** ಎಂದು ಗುರುತಿಸಲಾಗಿದೆ.

21. ಸರ್ವೆ ನಂ.160 ರಲ್ಲಿ ಎಷ್ಟು ಜಮೀನು ಇದೆ ಎಂದು ಮತ್ತು ಅದರಲ್ಲಿ ಎಷ್ಟು ಸಬ್ ನಂಬರ್ ಗಳ ಅಡಿ ಪೋಡ್ ಆಗಿದೆ ಎಂದು ನಾನು ತನಿಖೆ ಮಾಡಿರುವುದಿಲ್ಲ. ಸರ್ವೆಯರ್ ಅನ್ನು ಕರೆಸಿ ಘಟನಾ ಸ್ಥಳ ಯಾವ ನಿಗಧಿತ ಸರ್ವೆ ನಂಬರ್ ಅಥವ ಪೋಡಿನಡಿ ಅಸ್ತಿತ್ವದಲ್ಲಿದೆ ಎಂದು ತನಿಖೆ ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು, ದಿಶಾಂಕ್ ಆ್ಯಪ್ ನಲ್ಲಿ ಘಟನಾ ಸ್ಥಳ ಆರೋಪಿಯ ಮಾಲೀಕತ್ವದಲ್ಲಿ ಕಂಡು ಬರುವ ಕಾರಣ ಪ್ರತ್ಯೇಕ ಸರ್ವೆ ಮಾಡಿಸುವ ಅವಶ್ಯಕತೆ ಇಲ್ಲ ಎನ್ನುತ್ತಾರೆ. ಕಂದಾಯ ಅಧಿಕಾರಿಗಳು ನೀಡಿರುವ ದಾಖಲೆಗಳಲ್ಲಾಗಲೀ ಅಥವಾ ನಾನು ದಾಖಲಿಸಿದ ದೋಷರೋಪಣ ಪತ್ರದಲ್ಲಾಗಲೀ, ದಿಶಾಂಕ್ ಆ್ಯಪ್ ಅನ್ನು ಬಳಸಿ ಆರೋಪಿ ಘಟನ ಸ್ಥಳದ ಅನುಭವದಾರನಾಗಿ ಇರುವ ಬಗ್ಗೆ ಕಂಡು ಕೊಂಡ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಸರ್ವೆ ನಂ.160 ರ ಜಮೀನಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಜಮೀನಿನ ಅನುಭವದಲ್ಲಿರುವ ವಾಪಸಂದ್ರ ಶ್ರೀನಿವಾಸ್ ನನ್ನ ವಿಚಾರಣೆ ಮಾಡಿ, ಈ ಪ್ರಕರಣದ ಸಾಕ್ಷಿದಾರರನ್ನಾಗಿ ಮಾಡಿದರೆ ಸತ್ಯ ಹೊರಬರುವುದಾಗಿ ಮನಗೊಂಡು, ಆತನನ್ನು ಸಾಕ್ಷಿಧಾರನ್ನಾಗಿಸದೇ ಆರೋಪಿಯ ವಿರುದ್ದ, ಸುಳ್ಳು ದೋಷರೋಪಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

22. ಪ್ರಾಸಾ-4 ತಹಸೀಲ್ದಾರ್ ರವರು ನನ್ನ ಮುಂದೆ ನೀಡಿದ ಹೇಳಿಕೆಯಲ್ಲಿ ಘಟನಾ ಸ್ಥಳದ ಸರ್ವೆ ನಂಬರ್ ಅನ್ನು ಹೇಳಿಲ್ಲ ಎಂದರೆ, ಸಾಕ್ಷಿಯು ಸದರಿ

ದಾಖಲಾತಿಗಳನ್ನು ನಂತರ ಸಂಗ್ರಹಿಸಿರುವುದಾಗಿ ನುಡಿಯುತ್ತಾರೆ. ಕಂದಾಯ ದಾಖಲಾತಿಗಳನ್ನು ತಹಸೀಲ್ದಾರ್ ರಿಂದ ಪಡೆದ ನಂತರ ಅವರನ್ನು ಪುನಃ ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ ಎಂದರೆ ಸಾಕ್ಷಿಯು, ನಿಪಿ–10 ರ ದಾಖಲೆಯಲ್ಲಿ ತಹಸೀಲ್ದಾರ್ ರವರು ಸರ್ವೆ ನಂ.160/4 ರ ಪಹಣಿಯೊಂದಿಗೆ ಮಾಹಿತಿ ನೀಡಿರುವ ಕಾರಣ ಮರು ವಿಚಾರಣೆಯ ಅವಶ್ಯಕತೆ ಕಂಡು ಬಂದಿಲ್ಲ ಎನ್ನುತ್ತಾರೆ. ಯಾವುದೇ ಪಂಚರು ಹಾಗೂ ಸಿಬ್ಬಂದಿಗಳು ನನ್ನ ಮುಂದೆ ಹಾಜರಾಗಿ ಹೇಳಿಕೆ ನೀಡಿಲ್ಲ, ನಾನೇ ಅವುಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖೆಯಲ್ಲಿ ಆರೋಪಿ ವಿರುದ್ಧ ಯಾವುದೇ ಸಾಕ್ಷ್ಯಧಾರಗಳು ಕಂಡುಬಂದಿಲ್ಲದಿದ್ದರೂ ಸಹ ಠಾಣೆಯ ಅಂಕಿಗಳಿಗೋಸ್ಕರ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಮುಖ್ಯವಿಚಾರಣೆಗೆ ಅನುಮತಿ ಕೋರಿದ್ದು, ನೀಡಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

23. ದಾಳಿ ಕಾಲಕ್ಕೆ ಮತ್ತು correctness certificate ಮಾಡುವ ಕಾಲಕ್ಕೆ ಫೋಟೋಗಳನ್ನು ASI ನಾರಾಯಣರೆಡ್ಡಿ ರವರು ತೆಗೆದಿದ್ದು, ಅವುಗಳನ್ನು ಪ್ರಿಂಟ್ ಹಾಕಿಸಿ, ಹಾಜರು ಪಡಿಸಿರುವ ಬಗ್ಗೆ ಎರಡು 65(b) ಸರ್ಟಿಫಿಕೇಟ್ ಗಳನ್ನು ಅವರಿಂದ ಸ್ವೀಕರಿಸಿ ಹಾಜರು ಪಡಿಸಿದ್ದು, ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ–19** ಎಂದು ಗುರುತಿಸಲಾಯಿತು. ಸಾಕ್ಷಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಮುಂದುವರೆದ ಪಾಟೀ ಸವಾಲುಃ** **ಆರೋಪಿ ಪರ ವಕೀಲರಾದ ಶ್ರೀ ಆರ್ ಜಿ ರವರಿಂದಃ**

24. ನಿಪಿ-19 ರ ಪ್ರಮಾಣ ಪತ್ರಗಳಲ್ಲಿ ಎಷ್ಟು ಫೋಟೋಗಳನ್ನು ತೆಗೆಯಲಾಗಿತ್ತು ಮತ್ತು ಎಷ್ಟು ಫೋಟೋಗಳನ್ನು ಪ್ರಿಂಟ್ ಹಾಕಿಸಲಾಗಿತ್ತು ಎನ್ನುವ ಬಗ್ಗೆ ನಮೂದಿಲ್ಲ ಎಂದರೆ ಸಾಕ್ಷಿಯು ದೋಷರೋಪಣ ಪತ್ರದಲ್ಲಿ ಹಾಜರು ಪಡಿಸಿರುವ ಫೋಟೋಗಳನ್ನು ಮಾತ್ರ ತೆಗೆಯಲಾಗಿತ್ತು ಎನ್ನುತ್ತಾರೆ. ಸದರಿ ಪ್ರಮಾಣ ಪತ್ರಗಳಲ್ಲಿ ಫೋಟೋಗಳನ್ನು ತೆಗೆಯಲು ಬಳಸಿದ ಮೊಬೈಲ್ ನ ಮೇಕ್, ಮಾಡಲ್, IMEI ನಂಬರ್ ಗಳನ್ನು ನಮೂದಿಸಿಲ್ಲ ಎಂದರೆ ಸರಿ. ಸದರಿ ಪ್ರಮಾಣ ಪತ್ರಗಳನ್ನು ಈ ದಿನ ತಯಾರಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ ಎಂದರೆ ಸರಿಯಲ್ಲ. ಆ ಕಾರಣದಿಂದ ಸದರಿ ಪ್ರಮಾಣ ಪತ್ರಗಳನ್ನು ದೋಷರೋಪಣ ಪತ್ರದೊಂದಿಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಿ.20.09.2022 ರಂದು ನೀಡಿರುವ ಪ್ರಮಾಣ ಪತ್ರದಲ್ಲಿ ಸರ್ವೆ ನಂಬರ್ 160/4 ರ ಜಮೀನು ಎಂದು ನಮೂದಿಸಿದೆ ಎಂದರೆ ಸರಿ. ಘಟನಾ ಸ್ಥಳದ ಜಮೀನಿನ ಸರ್ವೆ ನಂ.160/4 ಎಂದು ನಿಪಿ-10 ರಂತೆ ದಾಖಲೆಗಳನ್ನು ಸ್ವೀಕರಿಸುವವರೆಗೆ ನಮಗೆ ತಿಳಿದಿರಲಿಲ್ಲ ಎಂದರೆ ಸರಿ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**